





ಅಂಡಮಾನ್ ನಿಕೋಬಾರ್ ದ್ವೀಪ ಸಮೂಹ ಭಾರತದ ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಂದು. ಇಲ್ಲಿನ ರಾಜಧಾನಿ ಪೋರ್ಟ್‌ಬ್ಲೇರ್ ಚೆನ್ನೈನಿಂದ 1200 ಕಿ.ಮಿ. ದೂರದಲ್ಲಿದೆ. ಪೋರ್ಟ್‌ಬ್ಲೇರ್‌ಗೆ ಚೆನ್ನೈನಿಂದ 2 ಗಂಟೆಗಳ ವಿಮಾನ ಪಯಣ. ಪೋರ್ಟ್‌ಬ್ಲೇರ್‌ನಲ್ಲಿ ಸೆಲ್ಯುಲಾರ್ ಜೈಲು, ಸಮುದ್ರಿಕ, ಚತಾಮ್ ಸಾಮಿಲ್, ಮ್ಯೂಸಿಯಂಗಳು ಮತ್ತು ಬೀಚ್‌ಗಳಿವೆ. ಆದರೆ ಹ್ಯಾವ್‌ಲಾಕ್ ದ್ವೀಪದ ವೀಕ್ಷಣೆಯ ಮಜವೇ ಬೇರೆ.

ಹ್ಯಾವ್‌ಲಾಕ್ ದ್ವೀಪ ಪೋರ್ಟ್‌ಬ್ಲೇರ್‌ನಿಂದ 60 ಕಿ.ಮೀ ದೂರದಲ್ಲಿದೆ. ಇಲ್ಲಿಗೆ ಹೋಗಲು ಲಕ್ಷುರಿ ಕ್ರೂಸ್‌ನಿಂದ ಹಿಡಿದು ಸಾಮಾನ್ಯ ದರ್ಜೆಯ ಫೆರ್ರಿಗಳು ಸಿಗುತ್ತವೆ. ಸುಸಜ್ಜಿತ 'ಮ್ಯಾಕ್ರೂಸ್' ಎಂಬ ಎರಡು ಮಹಡಿಯ ಲಕ್ಷುರಿ ಕ್ರೂಸ್ ಅನ್ನು ನಾವು ಬಳಸಿಕೊಂಡೆವು. ಹ್ಯಾವ್‌ಲಾಕ್ ದ್ವೀಪ ಸೇರಲು 90 ನಿಮಿಷಗಳು ಬೇಕು. ಮಂದವಾಗಿ ಬೀಸುವ ಗಾಳಿ, ನೀಲ ಕಡಲ ಮೇಲೆ ವೈಯಾರವಾಗಿ ಸಾಗುವ ಕ್ರೂಸ್, ಕ್ರೂಸ್‌ನಲ್ಲಿ ತೇಲಿಬರುವ ಸಂಗೀತಕ್ಕೆ ತಾಳ ಹಾಕುವ ಅಲೆಗಳ ಶಬ್ದ, ಬಿಸಿ ಬಿಸಿಯಾದ ಕಾಫಿಯ ಸ್ವಾದ ಹೀರುತ್ತಾ, ನೀಲ ಕಡಲಿನ ಸೌಂದರ್ಯ ಆಸ್ವಾದಿಸುತ್ತಿದ್ದ 90 ನಿಮಿಷ ಸರಿದಿದ್ದೇ ಗೊತ್ತಾಗಲಿಲ್ಲ.

ಹ್ಯಾವ್‌ಲಾಕ್ ದ್ವೀಪದಲ್ಲಿ ತಂಗಲು ಸಾಮಾನ್ಯ ದರ್ಜೆಯ ಶ್ಯಾಕ್‌ಗಳು, ಬಜೆಟ್ ಹೋಟೆಲ್ ಮತ್ತು ಲಕ್ಷುರಿ ಕಾಟೇಜುಗಳು ದೊರೆಯುತ್ತವೆ. ಅತಿ ಚಿಕ್ಕ ದ್ವೀಪ. ಎಲ್ಲೆಲ್ಲಿ ನೋಡಿದರೂ ಗಗನಚುಂಬಿ ಮರಗಳು, ಹಕ್ಕಿಗಳ ಚಿಲಿಪಿಲಿ ನಾದ, ಹಸಿರು ರತ್ನ ಕಂಬಳಿ ಹೊತ್ತ ನೆಲ, ಸುತ್ತಲೂ ನೀಲ ಕಡಲು. ಆಧುನಿಕ ನಗರಗಳ ಗದ್ದಲ, ಗಡಿಬಿಡಿ, ಕಸದ ರಾಶಿ, ಮೋಟರ್ ವಾಹನಗಳ ಸದ್ದಿಲ್ಲ. ಶಾಲಾ ಕಾಲೇಜಿಗೆ ಮತ್ತು ಕೆಲಸಕ್ಕೆ ಓಡುವವರ ಸದ್ದುಗದ್ದಲವಿಲ್ಲ. ಯಾವುದೇ ಆತುರವಿಲ್ಲದೆ ನಮ್ಮದೇ ಲೋಕದಲ್ಲಿ ಮೈ ಮರೆಯಬಹುದಿಲ್ಲಿ.

## 'ರಾಧಾನಗರ' ಬೀಚ್

ಇದು ಏಷ್ಯಾ ಖಂಡದ 10 ಅತ್ಯುತ್ತಮ ಬೀಚ್‌ಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ. ಚೆನ್ನೈ, ಮುಂಬೈ, ಮಂಗಳೂರು ಬೀಚ್‌ಗಳಿಗಿಂತ ಭಿನ್ನ. ಪಾನಿಪುರಿ, ಬೇಲ್‌ಪುರಿ ಗಾಡಿಗಳ ಉಪಟಳವಿಲ್ಲ, ತಿಂದು ಬಿಸಾಡಿದ ಪ್ಲೇಟ್, ಕಪ್ಪು, ತೆಂಗಿನ ಬುರುಡೆಗಳ ರಾಶಿಯಿಲ್ಲ. ಎಲ್ಲೆಲ್ಲಿ ನೋಡಿದರೂ ಶುಭ್ರವಾದ ಬಿಳಿ ಮರಳು, ನೀಲ ಸಮುದ್ರ, ದಡಕ್ಕೆ ಅಪ್ಪಳಿಸುವ ಅಲೆಗಳ ಅಬ್ಬರ, ಬೀಚನ್ನು ಕಾಯಲು ನಿಂತ ಸೈನಿಕರಂತೆ ಸಾಲಾಗಿ ನಿಂತಿರುವ ಮರಗಳು ಮಾತ್ರ. ಅಲೆಗಳು ಸಿಂಪಡಿಸುವ ನೀರಿನಲ್ಲಿ ನೆನೆಯುತ್ತಾ, ಅಲೆಗಳ ಜೊತೆ ಆಟ ಆಡುತ್ತಾ, ದಂಡೆಯ ಉದ್ದಕ್ಕೂ ಮೆಲ್ಲಗೆ ನಡೆಯುತ್ತಾ ಇದ್ದ ನಮಗೆ ಹೊತ್ತು ಹೋದದ್ದೇ ತಿಳಿಯಲಿಲ್ಲ.

## 'ಎಲಿಫೆಂಟ್ ಬೀಚ್'

ಬೀಚ್‌ಗೆ ಹೋಗಲೂ ಫೆರ್ರಿಗಳು ಸಿಗುತ್ತದೆ. ಇದು ಮುಖ್ಯವಾಗಿ ವಾಟರ್ ಸ್ಪೋರ್ಟ್ ಅಂದರೆ ವಿವಿಧ ಬಗೆಯ ಜಲ ಕ್ರೀಡೆಗಳಿಗೆ ಹೇಳಿ ಮಾಡಿಸಿದ ಬೀಚ್. ಇಲ್ಲಿನ ಇನ್ನೊಂದು ಆಕರ್ಷಣೆ ಎಂದರೆ ಹವಳದ ದಿಣ್ಣೆಗಳು. ನೋಡಲು ಧೈರ್ಯವಿರುವವರು ಸ್ಕೂಬಾ ಡೈವಿಂಗ್ ಅಥವಾ ಸ್ನಾರ್ಕ್‌ಲಿಂಗ್‌ಗೆ ಹೋಗಬಹುದು. ಹವಳದ ದಿಣ್ಣೆಗಳನ್ನು ನೋಡಲು 'ಗ್ಲಾಸ್ ಬಾಟಮ್ ಬೋಟ್'ನ ವ್ಯವಸ್ಥೆ ಕೂಡ ಇದೆ. ಈ ಬೋಟಿನ ಕೆಳಭಾಗ ಪೂರ್ತಿ ಗಾಜಿನದಾಗಿರುತ್ತದೆ. ಪ್ರವಾಸಿಗರು ಕುಳಿತುಕೊಳ್ಳಲು ಬೋಟಿನ ಎರಡೂ ಕಡೆ ಆಸನದ ಸೌಕರ್ಯವಿದೆ. ತಲೆ ಕೆಳಗೆ ಮಾಡಿ ನೋಡಿದರೆ ನೂರಾರು ಅಡಿ ಕೆಳಗಿರುವ ಕೆಂಪು, ಬಿಳಿ, ತಿಳಿಗೆಂಪು, ಹಸಿರು ಬಣ್ಣದ ಹವಳ ಗುಂಪು ಗುಂಪಾಗಿ ಕ್ಯಾಲಿಫ್ಲವರ್‌ನಂತೆ ಕಾಣುತ್ತದೆ. ನೂರಾರು ಅಡಿ ಕೆಳಗಿರುವ ಹವಳದ ದಂಡೆಗಳು ನಮ್ಮ ಕೈಗೆ ಸಿಗುವಂತೆಯೇ ಭಾಸವಾಗುತ್ತದೆ.

ಹವಳದ ದಿಣ್ಣೆಗಳು, ತರಹೆವಾರಿ ಮೀನುಗಳು ಮತ್ತು ಬೇರೆ ಜಲಚರಗಳು ಸಮುದ್ರದ ಮತ್ತೊಂದು ಲೋಕದ ಅನಾವರಣ ಮಾಡುತ್ತವೆ. ಇದು ನಿಜಕ್ಕೂ ಒಂದು ಅದ್ಭುತ ಲೋಕ.